
ಕೆ.ವಿ. ಗೋವಿಂದಾಚಾರಿ, ಮೈಸೂರು

ಇತ್ತೀಚೆಗೆ ಕಾರನ್ನು ಮಹಿಳೆಯರೇ ಹೆಚ್ಚಾಗಿ ಚಲಾಯಿಸುತ್ತಿದ್ದಾರಲ್ಲಾ?



ಮನೆ, ಆಫೀಸ್, ಕಂಪನಿ, ಪಕ್ಷಗಳನ್ನೇ ಚಲಾಯಿಸುವಾಗ ಇದೇನು ಮಹಾ!

ಕಾವ್ಯಶ್ರೀ, ಶೋರಾಪುರ

ಪುಣ್ಯಕ್ಷೇತ್ರಗಳಲ್ಲಿ ಮಾತ್ರ ‘ಸದ್ಗತಿ’ ದೊರೆಯುತ್ತದೆಯೆ?

ಹೂಂ. ಅಲ್ಲಿ ಆಚರಣೆಯ ಗತಿ ನಡೆಯುವುದೇ ಸಿಕ್ಕಾಪಟ್ಟೆ ಸದ್ದಿನಲ್ಲಿ.

ಅನಸೂಯಾ ಟಿ. ಕೇದಿಗೆಮನೆ

ಚಂದ್ರಲೋಕ, ಸೂರ್ಯಲೋಕಕ್ಕೆ ಭೇಟಿ ಕೊಟ್ಟಾಯಿತು. ದೇವಲೋಕಕ್ಕೆ ಯಾವಾಗ?

ಕೊಡುತ್ತಲೇ ಇರುವರಲ್ಲ; ಅದು ರಿಟರ್ನ್ ಟಿಕೆಟ್ ಇಲ್ಲದ ಜರ್ನಿ.

ಎಂ.ಸಿ. ಧನ್ಯತಾ, ಬೆಂಗಳೂರು

ಅಪ್ಪನ ಪಾಲಿಗೆ ಮಗಳು ತಾಯಿಯಾದರೆ, ಮಗನು ತಂದೆ ಆಗಲಾರನೆ?



ಅಪ್ಪನ ಅವಶ್ಯಕತೆಯನ್ನು ಗಮನಿಸಿ ‘ತಂದೆ’ ಎಂದು ತಂದುಕೊಟ್ಟರೆ ಆಗಬಹುದು.

ಬಿ. ಚಂದ್ರೇಗೌಡ, ಬೆಂಗಳೂರು

ಮುತ್ತೈದೆ: ಈ ಪದದ ಅರ್ಥವೇನು?

ಪತಿ ಎಂಬ ಪ್ರಾಣಿ ಬದುಕಿರುವವರೆಗೆ ಸತಿಗೆ ಸಮಾಜವು ಕೊಡುವ ಸರ್ಟಿಫಿಕೇಟ್.

ಬಿ. ಬಸವರಾಜ್, ಹರಿಹರ

ಹಾಸಿಗೆ ಇದ್ದಷ್ಟು ಕಾಲು ಚಾಚಬೇಕಾ? ಸಾಲ ಮಾಡಿ ತುಪ್ಪ ತಿನ್ನಬೇಕಾ?

ಕಡಿಮೆಯೂ ಚಾಚಬಹುದು; ಬೊಜ್ಜು ಇಲ್ಲದಿದ್ದರೆ ಮಾತ್ರ.

ವಿ. ಹೇಮಂತಕುಮಾರ್, ಬೆಂಗಳೂರು

ಭವಿಷ್ಯ ಹೇಳುವವರಿಗೂ, ಭವಿಷ್ಯ ರೂಪಿಸುವವರಿಗೂ ವ್ಯತ್ಯಾಸವೇನು?

ಅವರದು ಬೆದರುನುಡಿ; ಇವರದು ಚತುರ ನುಡಿ.

ಮಲ್ಲಿಕಾರ್ಜುನ, ಸುರಧೇನುಪುರ

ಉದ್ದದ ಪ್ರತಿಮೆಗಳ ಉದ್ದೇಶವೇನು?

ಎತ್ತರಕ್ಕೆ ನಿಲ್ಲಿಸಿದರೆ ಸೊಂಟ, ಮಂಡಿ ತೊಂದರೆ ಆದೀತೆಂದು ಉದ್ದಕ್ಕೆ ಇರಿಸಿರುವರಂತೆ.

ಸಿ.ಎಸ್. ಸೂರ್ಯಪ್ರಕಾಶ್, ಬೆಂಗಳೂರು

ನಮ್ಮ ಪೂಜೆಗಳು ದೇವರ ಮನಸ್ಸನ್ನು ಬದಲಿಸುವಷ್ಟು ಪ್ರಭಾವವುಳ್ಳವಾದರೆ ನಾವು ದೇವರಿಗಿಂತ ಶಕ್ತರೆ?

ನೀವೆಸೆದ ಪಟಾಕಿ ಢಂ ಎಂದರೆ ನೀವು ಸ್ಫೋಟಕ ವ್ಯಕ್ತಿ ಎಂದಂತಾಯಿತು!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

ಮಾನವರಿಗೆ ಇರುವುದೊಂದೇ ಪ್ರಾಣವಾದರೂ ಪಂಚಪ್ರಾಣ ಅಂತಾರಲ್ಲಾ?

ಯಮಕಿಂಕರರು ಪಂಚ್ ಮಾಡಿದಾಗಲೇ ಹೋಗುವ ಪ್ರಾಣವಾದ್ದರಿಂದ ಪಂಚ್‌ಅ ಪ್ರಾಣವಂತೆ.

ಕವಿತಾ ವೆಂಕಟೇಶ್

ಹನಿಟ್ರ್ಯಾಪ್‌ನಲ್ಲಿ ಹನಿ ಇರೋದಿಲ್ಲ, ಬರಿದೇ ಕಹಾನಿ ಇರುತ್ತೆ. ಯಾಕೆ?

ರಾಣಿಜೇನು ಗೂಡು ತೊರೆದ ಮೇಲೆ ಇರುವುದು ಜೇನುಗಳ್ಳರ ಕಥೆಯಷ್ಟೆ.

ವಿಜೇಂದ್ರ, ಮೈಸೂರು

‘ಸತ್ತವಳು’ ಎದ್ದು ಬಂದು ಮೈಸೂರಿನ ಕೋರ್ಟಿನಲ್ಲಿ ಹಾಜರಾಗಿದ್ದಾಳಲ್ಲಾ?

‘ಮುಂದಿನ ಜನ್ಮದಲ್ಲೂ ನೀನೇ ನನ್ನ ಸತಿಯಾಗು’ ಎಂದಿದ್ದನಂತೆ ಪತಿ.

ಹನುಮಂತಪ್ಪ ಕೊಳಗಿ, ಸಾಗರ

ಆ್ಯಡ್‌ಗಳಿಗೆ ಸೆಲೆಬ್ರಿಟಿಗಳ ಬದಲು ಬಡ ಪದವೀಧರನಿಗೆ ಅವಕಾಶವಿತ್ತರೆ ಅವನ ಬದುಕು ಚೆನ್ನಾಗುವುದಲ್ಲವೆ?

ಊಹೂಂ. ಆ್ಯಡ್‌ನ ಸುಳ್ಳುಗಳನ್ನು ಒದರಿಯೂ ಅರಗಿಸಿಕೊಳ್ಳಲು ಸೆಲೆಬ್ರಿಟಿಗಷ್ಟೇ ಸಾಧ್ಯ.

## ಬಹುಮಾನಿತ ಪ್ರಶ್ನೆ

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ನಾವು ಏನಾದ್ರೂ ಮರೆತುಹೋದ್ರೆ, ಏನನ್ನು ಮರೆತೆವೆಂದು ಜ್ಞಾಪಿಸಿಕೊಳ್ಳುವುದು ಹೇಗೆ?

ಸುಮ್ಮನಿದ್ದುಬಿಡಿ. ಸತಿಯೋ, ಬಾಸೋ ಬೈದು ಜ್ಞಾಪಿಸುತ್ತಾರೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಬದುಕು ಹರಿಯುವ ನದಿಯೆ?

ಬಾಲ್ಯ ಉಗಮ; ಯೌವನ ಪ್ರವಾಹ; ಸಾವು ಅನಂತಸಾಗರದಲ್ಲಿ ಐಕ್ಯ.

ಜಗದೀಶ ಬಿ. ಹೊಸೂರು, ಮೈಸೂರು

ವಯಸ್ಸಾದ ರಾಜಕಾರಣಿಗಳು ಹನಿಟ್ರ್ಯಾಪ್‌ಗೆ ಒಳಗಾಗಲು ಸಾಧ್ಯವೆ?

wise ಆಗದಿದ್ದರೆ, ಆಗಬಹುದು.

ಬೂಕನಕೆರೆ ವಿಜೇಂದ್ರ, ಮೈಸೂರು

ವಿಜ್ಞಾನಿಗಳೇಕೆ ಹೇರ್ ಕಟ್ ಮಾಡಿಸಿಕೊಂಡಿರುವುದಿಲ್ಲ?



ಅವರಿಗೆ ಅನ್ಯರು (ಕ್ಷೌರಿಕರು) ತಮ್ಮ ಮೇಲೆ ಪ್ರಯೋಗ ಮಾಡುವುದು ಇಷ್ಟವಾಗದಂತೆ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

ಪರಿಸರ ಸಂರಕ್ಷಣೆಗೆ ನಿಮ್ಮ ಯೋಜನೆ ಏನು ರಾಮ್?

‘ಮರಗಳ ಕಡಿತ ಮರಣದತ್ತ ನಡೆತ’ ಎಂಬ ಅರಿವನ್ನು ಹಬ್ಬುವುದು.

ಚಿಕ್ಕೋಬನಹಳ್ಳಿ ಚಾಂದ್ ಬಾಷ, ತಳಕು

ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳನ್ನು ಗಮನಿಸುತ್ತಿರುವ ಜನಾಂಗದ ಗತಿ?

ತತ್ಫಲವಾದ worry, hurryಗಳಿಂದ ಶ್ವಾಸಾಂಗ, ಜೀರ್ಣಾಂಗ ಢಮಾರ್.

ಬಿ.ಆರ್. ಉಷಾ, ಬೆಂಗಳೂರು

ಸಿನಿಮಾ ಹೀರೊನ ಮದುವೆ ಆಗಬೇಕೆಂದಿರುವೆ. ನಿಮ್ಮ ಸಲಹೆ?

ವಿಗ್ಗು, ಬೋಟೊಕ್ಸ್‌ಗಳೆಡೆ ಸಹನೆಯಿದ್ದರೆ ಆಗಬಹುದು.

■ ರಾಮ್